ಕೂಡ ಇದೇ ಬಗೆಯ ಮಾತನ್ನು ವಿಸ್ತರಿಸುತ್ತ ಮತ್ತಷ್ಟು ಅನುವಾದಗಳು ಹುಟ್ಟಿಕೊಳ್ಳಬೇಕು, ಇಂಗ್ಲಿಷ್ ಅಥವಾ ಜರ್ಮನ್‌ನಲ್ಲೇ ರಿಲ್ಕನನ್ನು ದಕ್ಕಿಸಿಕೊಳ್ಳುವ ಪ್ರಯತ್ನಗಳು ನಡೆಯಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಬಹುಶಃ ರಿಲ್ಕ ಒಂದು ಅನುವಾದದಲ್ಲಿ ದಕ್ಕುವುದು ಕಷ್ಟ ಎಂಬ ಹಲವು ಅನುವಾದಕರ ಮಾತು ಸರಿ. ಹತ್ತು ಹಲವು ಅನುವಾದಗಳು ಅವನನ್ನು ದಕ್ಕಿಸಿಕೊಳ್ಳಲು ಅನಿವಾರ್ಯ.

ಒಂದು ಕಾದಂಬರಿಯನ್ನು ಅನುವಾದಿಸುವುದಕ್ಕೂ ಒಂದು ಕವಿತೆಯನ್ನು ಅನುವಾದಿಸುವುದಕ್ಕೂ ಮೂಲಭೂತ ವ್ಯತ್ಯಾಸವೊಂದಿದೆ. ಇದು ಕವಿತೆಯನ್ನು ಓದುವ ಪ್ರಕ್ರಿಯೆಗೂ ಅನ್ವಯಿಸುವ ಮಾತು. ಹಾಗಾಗಿ ಕವಿತೆಯ ಅನುವಾದ ಅಥವಾ ಓದು ಕೂಡ ಒಂದು ವಿಚಿತ್ರವಾದ, ವಿಶಿಷ್ಟವಾದ ಅನುಭವ. ಒಂದು ಕವಿತೆಯಲ್ಲಿನ ಎಲ್ಲಾ ಶಬ್ದಗಳನ್ನೂ, ಅರ್ಥಕ್ಕೆ ಚ್ಯುತಿಯಿಲ್ಲದಂತೆ ಅನುವಾದಿಸಿದಾಗಲೂ ಕವಿ ಏನನ್ನು ಹಾಡಿದ್ದನೋ ಅದು ಇನ್ನೊಂದು ಭಾಷೆಯಲ್ಲಿ ಮೂಡದೇ ಹೋಗಬಹುದು. ಇಂಥ ಅಪಾಯ ಕಾದಂಬರಿಗೆ ಕಡಿಮೆ. ಏಕೆಂದರೆ, ಒಂದು ಕವಿತೆ ಅದನ್ನು ಬರೆದ ಪದಗಳಲ್ಲಿ ಇರುವುದಕ್ಕಿಂತ, ಕವಿ ಅಲ್ಲಿ ಬರೆಯದೇ ಬಿಟ್ಟಿರುವುದರಲ್ಲಿ, ಬರೆದ ಪದಗಳ ಸುತ್ತ ಇರುವ ಮೌನ, ನಿಶ್ಶಬ್ದಗಳಲ್ಲಿ ಇರುವುದೇ ಹೆಚ್ಚು. ಅವನು ಬರೆಯದೇ ಬಿಟ್ಟ ಚಿತ್ರ ಮತ್ತು ಬಿಟ್ಟಿರುವುದರಿಂದಲೇ ಸಿಗುತ್ತಿರುವ ಕವಿತೆಯ ಅನುಭೂತಿ ಎರಡೂ ಅಮೂರ್ತವಾದುದು, ಊಹೆಗೆ ಬಿಟ್ಟದ್ದು ಮತ್ತು ಹಾಗಿದ್ದೂ ಒಂದು ನೆಲೆಯಲ್ಲಿ ನಿರ್ದಿಷ್ಟವಾದದ್ದು. ಆದರೆ ಅದನ್ನು ತಲುಪುವುದು ಹೇಗೆ? ತಲುಪುವುದಕ್ಕೆ ಅವನು ಬರೆದಿರುವ ಪದಗಳೇ ಆಧಾರವಾಗಿದ್ದೂ ಅವುಗಳನ್ನು ಮೀರುವುದು ಹೇಗೆ? ಅದನ್ನು ಸುಲಭಗೊಳಿಸುವ, ಅರ್ಥದ ಹಂಗಿನಿಂದ ಪಾರಾದ ಕಾವ್ಯಭಾಷೆಯೊಂದು ಓದುಗನಿಗೆ ಸಿಗಬಹುದೇ?

ಇದಕ್ಕೆ ಬಹುಶಃ ಕವಿಯನ್ನು ಅರಿಯದೇ ಅವನ ಕವಿತೆಯನ್ನು ಅರಿಯುವುದು ಕಷ್ಟ ಮತ್ತು ಕವಿತೆಯನ್ನು ಈ ರೀತಿ ಅರಿಯದೇ ಅದನ್ನು ಇನ್ನೊಂದೇ ಭಾಷೆಯಲ್ಲಿ ಮರುನುಡಿಯುವುದು ಕೂಡ ಕಷ್ಟ. ಎಚ್.ಎಸ್. ರಾಘವೇಂದ್ರ ರಾವ್ ಅವರು ರಿಲ್ಕನ ಕವಿತೆಗಳನ್ನು ಅನುವಾದಕ್ಕೆ ಕೈಗೆತ್ತಿಕೊಂಡ ಹಿನ್ನೆಲೆ ಇದು, ಅವರು ಸಾಧಿಸಿದ ತಪಸ್ಸು ಇದು ಎಂದು ಅನಿಸುತ್ತದೆ, ಇಲ್ಲಿನ ಅನುವಾದಗಳಲ್ಲಿ ಅವರಿಗೆ ಸಿದ್ಧಿಸಿದ ರಿಲ್ಕೆಯನ್ನು ಆವಾಹಿಸಿಕೊಳ್ಳುವಾಗ. ಸಂಕೀರ್ಣ ವ್ಯಕ್ತಿತ್ವದ ರಿಲ್ಕನ ಮಹತ್ವದ ಕವಿತೆಗಳು ಅಧ್ಯಾತ್ಮದ, ಸಾವಿನ, ಇಡೀ ಬದುಕಿನ ನಿರರ್ಥಕತೆ–ಅರ್ಥಹೀನತೆ ಮತ್ತು ವ್ಯರ್ಥಾಲಾಪಗಳ ಹಿನ್ನೆಲೆಯಲ್ಲಿಯೇ, ಅದನ್ನು ಬದುಕಿನ ಸಹಜ ಭಾಗವೆಂದೇ ಒಪ್ಪಿಕೊಂಡು ಅರಿಯುವ ಪ್ರಯತ್ನದಂತಿವೆ. ಇವುಗಳನ್ನು ಇಷ್ಟಪಟ್ಟು ತನ್ನ ಭಾಷೆಗೆ ತರಬೇಕೆಂಬ ಸಾಹಸಕ್ಕೆ ಇಳಿಯುವುದೆಂದರೆ ಒಂದು ದೀರ್ಘಾವಧಿ ತಪಸ್ಸಿಗೆ ಸಿದ್ಧರಾದಂತೆಯೇ ಸರಿ. ಎಚ್ಚೆಸ್ಸಾರ್ ಇದನ್ನು ಮಾಡಿದ್ದು, ಈಗವರು ನಮ್ಮ ಕೈಗಿತ್ತಿರುವ ಪುಸ್ತಕ ಅಂಥ ಒಂದು ಸಿದ್ಧಿಯ ಮಂತ್ರಫಲದಂತಿದೆ.

ಇದನ್ನವರು "ಮಂಜಿನ ಶಿವಾಲಯಕ್ಕೆ..." ಎಂದು ಕರೆದಿರುವುದು ಕೂಡ ಅತ್ಯಂತ ಅರ್ಥಪೂರ್ಣವಾಗಿದೆ. ಶಿವನು ಸತ್ಯ ಮತ್ತು ಸೌಂದರ್ಯದ ಪ್ರತೀಕ. ಕಾವ್ಯದ ಗಮ್ಯವೂ ಸತ್ಯ ಮತ್ತು ಸೌಂದರ್ಯವೇ. ಶಿವನು ಲಯಕರ್ತ ಮತ್ತು ಆ ನೆಲೆಯಲ್ಲಿ ಸಾವಿಗೆ, ಮರಣಾಂತರದ ಜಗತ್ತಿಗೆ ಒಂದು ರೂಪಕ. ರಿಲ್ಕೆಯ ಶೋಧದ ನೆಲೆಗಳು ಕೂಡ ಸಾವು ಮತ್ತು ಬದುಕಿನ ಅಂಚಿನಲ್ಲೇ ನಡೆಯುತ್ತವೆ. ಇನ್ನು ಮಂಜಿನ ಶಿವಾಲಯ ಎನ್ನುವಲ್ಲೇ ಅದು ಕ್ಷಣಭಂಗುರ ಆಲಯವೆಂಬ ಹೊಳಹು ಕೂಡ ಇದೆ. ಮಂಜು ಕರಗುವಂಥದ್ದು, ನೀರಾಗಿ ಹರಿಯುವಂಥದ್ದು. ಹಾಗಾಗಿ ಅದರ ಆಲಯವೇ ಬಯಲು ಕೂಡ ಹೌದು. ಮಂಜು, ಶಿವ ಮತ್ತು ಆಲಯ ಎನ್ನುವಲ್ಲಿಯೇ ಒಂದು ವಿಚಿತ್ರ ಸಂಯೋಗವೂ, ಅದ್ವೈತವೂ ಇದೆ. ಚಾಂಡಾಲನ ಕತೆಯೂ ಇಲ್ಲಿ ಮತ್ತೆ ನೆನಪಾಗುತ್ತದೆ.